# ಕರುಣಾಮಯಿ

ಮೂಲ ಬಂಗಾಳಿ : **ಸ್ವಾಮಿ ಸತ್‌ಸ್ವರೂಪಾನಂದ**

ಕನ್ನಡಕ್ಕೆ : **ಸ್ವಾಮಿ ಜ್ಞಾನಯೋಗಾನಂದ**

ಶ್ರೀಮಾತೆಯವರನ್ನು ಹತ್ತಿರದಿಂದ ಕಂಡವರು ಅವರನ್ನು ಕುರಿತು ಬರೆದ ಸ್ಮೃತಿಚಿತ್ರಗಳ ಸಂಕಲನವನ್ನು 'ಉದ್ಬೋಧನ ಕಾರ್ಯಾಲಯ'ವು ಬಂಗಾಳಿಯಲ್ಲಿ **'ಮಾಯೇರ್ ಪದಪ್ರಾಂತೇ'** ಎಂಬ ಶೀರ್ಷಿಕೆಯಲ್ಲಿ, ನಾಲ್ಕು ಸಂಪುಟಗಳಲ್ಲಿ ಪ್ರಕಟಿಸಿದೆ. ಅದರಲ್ಲಿ ಶ್ರೀಮಾತೆಯವರ ಸಂನ್ಯಾಸೀ ಶಿಷ್ಯರು ಬರೆದ ಸ್ಮೃತಿಚಿತ್ರಗಳಲ್ಲಿ ಒಂದರ ಅನುವಾದವನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ. ಹಲವು ಮಂದಿ ಸಾಧಕರ, ಭಕ್ತರ ಹಾಗೂ ಆರ್ತರ ಬಾಳಿಗೆ ಸಂಜೀವಿನಿಯಂತೆ ಚೇತನದಾಯಕವಾದ ಉಪದೇಶಗಳು ಇಲ್ಲಿ ಸಂಗ್ರಹಿಸಲ್ಪಟ್ಟಿವೆ. ಶ್ರೀಮಾತೆಯವರ ಜೀವನದ ಹತ್ತು ಹಲವು ಮುಖಗಳು ದಿವ್ಯಲೋಕದ ಅಪೂರ್ವ ಬೆಳಕಾಗಿ ಇಲ್ಲಿ ಮಿಂಚಿವೆ. ಮೂಲ ಲೇಖಕರು ಶ್ರೀಮಾತೆಯವರ ಶಿಷ್ಯರು.

'ನಿರಾಕಾರಾಪಿ ಸಾಕಾರಾ ಕಸ್ತ್ವಾಂ ವೇದಿತುಮರ್ಹತಿ' ಎಂದು ಶಾಸ್ತ್ರ ಹೇಳುತ್ತದೆ. ನಿರಾಕಾರವಾದರೂ ಆಕಾರವನ್ನು ಹೊಂದುವುದು ಯಾಕೆ? 'ಉಪಾಸಕಾನಾಂ ಕಾರ್ಯಾರ್ಥಂ ಶ್ರೇಯಸೇ ಜಗತಾಮಪಿ.' ಭಕ್ತರಿಗೆ, ಮುಮುಕ್ಷುಗಳಿಗೆ ಮೋಕ್ಷವನ್ನು ನೀಡುವ ಮೂಲಕ ಅವರನ್ನು ಬಿಡುಗಡೆಗೊಳಿಸುವುದಕ್ಕಾಗಿ ಈ ಬಾರಿ ಮಾತೃರೂಪಿಣಿಯಾದ ಪರಾಶಕ್ತಿಯು ಅವತರಿಸಿ ಬಂದಿದ್ದಾಳೆ. ಮಹಾಮಾಯೆ ಶಾರದಾಮಾತೆ ಈ ಬಾರಿ ಅನೇಕ ಮಂದಿ ಭಕ್ತಜನರ ಮೇಲೆ ಹಲವು ರೂಪಗಳಲ್ಲಿ, ನೂರಾರು ಬಗೆಗಳಲ್ಲಿ ಕೃಪೆಗೈದಿದ್ದಾರೆ. ಶತರೂಪಿಣಿ ಶಾರದಾಮಾತೆ ಶತರೂಪಗಳಿಂದ ಪ್ರಕಾಶಗೊಂಡಿದ್ದಾರೆ — 'ಉಪಾಸಕಾನಾಂ ಕಾರ್ಯಾರ್ಥಂ ಶ್ರೇಯಸೇ ಜಗತಾಮಪಿ'.

ನನ್ನ ಈ ಕ್ಷುಲ್ಲಕ ಜೀವನವು ಜ್ಯೋತಿಃಸ್ವರೂಪಿಣಿಯಾದ ಶಾರದಾಮಾತೆಯವರ ಶತರೂಪಗಳ ಒಂದು ಕಿರಣದಿಂದ ಕೃತಾರ್ಥಗೊಂಡಿದೆ. ಜೀವನ ಸಂಧ್ಯೆಯ ಈ ದಿನಗಳಲ್ಲೂ ಆ ಉಜ್ವಲವಾಗಿ ಬೆಳಗುವ ಚಿನ್ಮಯ ಜ್ಯೋತಿಯು ನಿಚ್ಚಳವಾಗಿ ಕಾಣಿಸುತ್ತಿದೆ. ಯಾರು ಅವ್ಯಕ್ತಳೋ, ಯಾರು ಅಚಿಂತ್ಯಳೋ, ಅವಳನ್ನು ಭಾಷೆಯ ಮೂಲಕ ವ್ಯಕ್ತಗೊಳಿಸುವ ದುರ್ಬಲ ಪ್ರಯತ್ನ ನನ್ನದು.

ಆಗ ನನಗೆ ಸುಮಾರು ಇಪ್ಪತ್ತನಾಲ್ಕು-ಇಪ್ಪತ್ತೈದು ವರ್ಷ ವಯಸ್ಸು. ಆಗ ಕ್ರಿ.ಶ. ೧೯೧೯, ಕಾಟಿಹಾರ್‌ನ ಶಾಲೆಯೊಂದರಲ್ಲಿ ಅಧ್ಯಾಪಕನಾಗಿದ್ದೆ. ಒಂದು ಮೆಸ್‌ನಲ್ಲಿದ್ದುಕೊಂಡು, ಅಲ್ಲಿಂದ ಶಾಲೆಗೆ ಹೋಗಿ ಬರುತ್ತಿದ್ದೆ. ಅಘೋರಬಾಬು ಎಂಬ ಸಜ್ಜನರೊಂದಿಗೆ ಅಲ್ಲಿ ಮಾತುಕತೆ ನಡೆಯುತ್ತಿತ್ತು. ಒಂದು ದಿನ ನಾನು ಗಮನಿಸಿದೆ, ಅವರು ನಿರ್ಮಿಸಿದ್ದ ಒಂದು ಮನೆಯಿಂದ ಕಾವಿ ಬಟ್ಟೆ ಧರಿಸಿದ ಒಬ್ಬ ವ್ಯಕ್ತಿ ನಮ್ಮ ಮೆಸ್ ಕಡೆಗೇ ಬರುತ್ತಿದ್ದರು. ಅನಂತರ ಹಲವು ಬಾರಿ ಅವರು ಮೆಸ್‌ನತ್ತ ಬರುತ್ತಿದ್ದುದನ್ನು ಕಂಡು, ಕುತೂಹಲಗೊಂಡು ವಿಚಾರಿಸಿದಾಗ ತಿಳಿದುಬಂತು — ಅವರು ಬೇಲೂರು ಮಠಕ್ಕೆ ಸೇರಿದ ಸಂನ್ಯಾಸಿ ; ಪ್ರಸ್ತುತ ಆಧ್ಯಾತ್ಮಿಕ ವಿಚಾರಗಳ ಪ್ರಚಾರಕ್ಕಾಗಿ ಕಾಟಿಹಾರ್‌ಗೆ ಬಂದಿದ್ದಾರೆ — ಎಂದು. ಅಘೋರಬಾಬುಗಳ ಮನೆಯಲ್ಲಿ ಅವರ ಕುಟುಂಬದವರು ಬಳಸುವ ಸ್ನಾನದ ಮನೆಯನ್ನೇ ಬಳಸಲು ಈ ಸಾಧುಗಳಿಗೆ ತುಂಬ ಅನಾನುಕೂಲವಾಗುವುದು ಎಂದು, ನಮ್ಮ ಮೆಸ್‌ನಲ್ಲೇ ಅವರ ಸ್ನಾನಾದಿಗಳಿಗೆ ವ್ಯವಸ್ಥೆಮಾಡಿದ್ದರು. ಸಾಧು, ಸಂನ್ಯಾಸಿಗಳ ಕಡೆಗೆ ನನಗೆ ಸಹಜವಾಗಿಯೇ ಆಕರ್ಷಣೆಯಿತ್ತು. ಆದ್ದರಿಂದ ಕೆಲವು ದಿನಗಳಲ್ಲೇ ನಾನು ಅವರೊಂದಿಗೆ ಮಾತುಕತೆ ಆರಂಭಿಸಿದೆ. ಅವರೊಂದಿಗೆ ನಡೆದ ಮಾತುಕತೆಗಳಿಂದ ನನಗೆ ತಿಳಿದು ಬಂತು, ಅವರ ಹೆಸರು ಸ್ವಾಮಿ ಜ್ಞಾನಾನಂದ ಎಂದು; ಜ್ಞಾನ್ ಮಹಾರಾಜ್ ಎಂದೇ ಅವರು ಪರಿಚಿತರು. ಅವರು ಬಹಳ ದಿನ ಜಯರಾಂಬಾಟಿಯಲ್ಲಿರುವ ಶ್ರೀರಾಮಕೃಷ್ಣರ ಸಹಧರ್ಮಿಣಿಯಾದ ಶ್ರೀಶಾರದಾಮಣೀ ದೇವಿಯವರ ಸೇವೆ



ಮಾಡಿದ್ದರು. ಶ್ರೀಮಾತೆಯವರ ಜೀವನದಲ್ಲಿ ಬರುವ ಹಲವು ಆಂತರಿಕ ವಿಚಾರಗಳನ್ನು ನಾನು ಅವರಿಂದಲೇ ಕೇಳಿದೆ. ಶ್ರೀಮಾತೆಯವರ ಸ್ನೇಹ, ಕರುಣೆಗಳು ಎಷ್ಟೊಂದು ಬಗೆಯಲ್ಲಿ ಭಕ್ತಜನರ ಜೀವನವನ್ನು ಪರಿವರ್ತಿಸಿದೆ ಎಂಬುದನ್ನು ಅವರು ತಿಳಿಸಿದರು. ಇಂಥ ಮಾತುಗಳನ್ನು ಕೇಳಿ ನನಗೂ ಶ್ರೀಮಾತೆಯವರನ್ನು ಒಂದು ಸಲ ಭೇಟಿಯಾಗಬೇಕೆಂಬ ಬಯಕೆ ಮೂಡಿತು. ಈ ವಿಷಯವನ್ನು ತಿಳಿಸಿದ ಕೂಡಲೇ ಜ್ಞಾನ್ ಮಹಾರಾಜ್ ಉತ್ಸಾಹಗೊಂಡರು. ಸಮಿಪದಲ್ಲೇ ಬರಲಿರುವ ದುರ್ಗಾಪೂಜೆಯ ರಜೆಯಲ್ಲಿ ಜಯರಾಂಬಾಟಿಗೆ ಹೋಗಿ ಶ್ರೀಮಾತೆಯವರ ದರ್ಶನ ಪಡೆಯಲು ಅವರು ನನಗೆ ಹೇಳಿದರು.

ಕ್ರಿ.ಶ. ೧೯೧೯ ನೇ ಇಸವಿಯ ದುರ್ಗಾಪೂಜೆಯ ರಜೆಯಲ್ಲಿ ಜ್ಞಾನ್ ಮಹಾರಾಜ್ ಜಯರಾಂಬಾಟಿಗೆ ನನ್ನನ್ನು ಜೊತೆಯಲ್ಲಿ ಕರೆದುಕೊಂಡು ಹೋದರು. ಆಗ ಶ್ರೀಮಾತೆ ತಮ್ಮ ಹೊಸ ಮನೆಯಲ್ಲಿ ವಾಸವಾಗಿದ್ದರು. ಆ ಮನೆಯಲ್ಲಿದ್ದ ಹೊರಗಿನ ಕೋಣೆಯಲ್ಲೇ ನನಗೆ ವಾಸಮಾಡಲು ವ್ಯವಸ್ಥೆಯಾಗಿತ್ತು. ನಾನು ಮನಸ್ಸಿನಲ್ಲಿ ಹಲವು ಬಗೆಯ ಕಲ್ಪನೆಗಳನ್ನು ಚಿತ್ರಿಸಿಕೊಂಡೇ ಜಯರಾಂಬಾಟಿಗೆ ಹೋಗಿದ್ದೆ. ಜ್ಞಾನ್ ಮಹಾರಾಜ್ ಮನೆಯೊಳಕ್ಕೆ ಹೋಗಿ, ಶ್ರೀಮಾತೆಯವರಿಗೆ ವಿಷಯ ತಿಳಿಸಿ, ಅವರ ಬಳಿಗೆ ನನ್ನನ್ನು ಕರೆದುಕೊಂಡು ಹೋದರು. ಆಗ ರಾಮಮಯ ಮಹಾರಾಜ್ ಶ್ರೀಮಾತೆಯವರ ಸೇವೆಗಾಗಿ ಅಲ್ಲೇ ಇದ್ದರು. ಅವರದು ಸಣ್ಣ ದೇಹ; ನನಗೆ ತುಂಬ ಇಷ್ಟವಾದರು. ಅವರೇ ನನ್ನನ್ನು ಶ್ರೀಮಾತೆಯವರ ಬಳಿಗೆ ಕರೆದುಕೊಂಡು ಹೋದರು. ಆಗ ಶ್ರೀಮಾತೆ ತಮ್ಮ ಕೋಣೆಯಲ್ಲಿ ಕುರ್ಚಿಯ ಮೇಲೆ ಕಾಲು ಇಳಿಬಿಟ್ಟು ಕುಳಿತಿದ್ದರು. ನಾನು ಶ್ರೀಮಾತೆಯವರಿಗೆ ನಮಸ್ಕರಿಸಿದೆ. ಶ್ರೀಮಾತೆಯವರ ಕೈ, ಕಾಲುಗಳ ಆಕಾರ ಹಾಗೂ ಮುಖದ ಚಹರೆಯನ್ನು ನೋಡಿದಾಗ ನನಗೆ ನನ್ನ ಅಜ್ಜಿಯವರ ನೆನಪಾಯಿತು. ಅವರಲ್ಲಿ ಯಾವುದೇ ದೈವೀಭಾವ ನನಗೆ ಕಂಡುಬರಲಿಲ್ಲ. ಅವರ ಕೈಕಾಲುಗಳು ತುಂಬ ಕ್ರಿಯಾಶೀಲ ಹಾಗೂ ಒರಟಾಗಿದ್ದಂತೆ ನನಗೆ ಕಂಡುಬಂತು. ಸ್ವತಃ ಅವರೇ ತಮ್ಮ ಸ್ವರೂಪವನ್ನು ತಿಳಿಸಿಕೊಡದಿದ್ದರೆ, ಅರಿವಿಗೆ ತಂದುಕೊಡದಿದ್ದರೆ ಅವರನ್ನು ಯಾರು ಅರಿಯಬಲ್ಲರು? ಅವರು 'ಮಾಯಯಾ ಬಹುರೂಪಿಣಿ'. ತಮ್ಮ ಸ್ವರೂಪವನ್ನು ಅವರು ಮಾಯೆಯಿಂದ ಮುಸುಕಿಬಿಟ್ಟಿದ್ದಾರೆ. ಆಗಿನ್ನೂ ನನಗೆ ತಕ್ಕ ಸಮಯ ಬಂದಿರಲಿಲ್ಲ ಎಂದು ನನಗೆ ಅನ್ನಿಸುತ್ತದೆ!

ಶ್ರೀಮಾತೆಯವರ ದೇಹ ಅನಾರೋಗ್ಯದಿಂದ ಕೂಡಿದೆ ಎಂದು ಕೇಳಿದೆ. ಶ್ರೀಮಾತೆಯವರ ಬಳಿ ಇದ್ದುಕೊಂಡು, ಅವರಿಂದ ನಾನು ದೀಕ್ಷೆ ಪಡೆಯಬಹುದೆಂದು ಜ್ಞಾನ್ ಮಹಾರಾಜ್ ಅಂದುಕೊಂಡಿದ್ದರು. ಆದರೆ ಶ್ರೀಮಾತೆ, ''ಮಗೂ, ಈಗ ನನ್ನ ದೇಹಾರೋಗ್ಯ ಚೆನ್ನಾಗಿಲ್ಲ. ಆಮೇಲೆ ದೀಕ್ಷೆ ನಡೆಯಲಿ'' ಎಂದರು. ನನ್ನ ಮನಸ್ಸು ಆಗ ದೀಕ್ಷೆಯನ್ನು ಪಡೆಯಲು ಸಿದ್ಧವಾಗಿರಲಿಲ್ಲ. ಆದ್ದರಿಂದಲೇ ಸ್ವತಃ ಮಾಯೆಯೇ ಆಗಿರುವ ಶ್ರೀಮಾತೆ , ಅನಾರೋಗ್ಯದ ನೆಪದಿಂದ ನನ್ನನ್ನು ಆಗ ಶಿಷ್ಯನಾಗಿ ಸ್ವೀಕರಿಸಲಿಲ್ಲ. ಆಗ ನಾನು ಅಲ್ಲಿ ಕೆಲವು ದಿನ ತಂಗಿದ್ದೆ. ಶ್ರೀಮಾತೆಯವರ ಕೌಟುಂಬಿಕ ಪರಿಸರ, ಸಾಂಸಾರಿಕವಾದ ಹಲವು ಬಗೆಯ ಜಂಜಾಟಗಳು ಇವುಗಳನ್ನೆಲ್ಲ ದೂರದಿಂದ ನಾನು ನೋಡಿದ್ದೆ. ಆದರೆ ನನಗೆ ಅವರ ವಿಷಯವಾಗಿ ಯಾವುದೇ ಬಗೆಯ ಉನ್ನತ ಭಾವದ ಅನುಭವವಾಗಿರಲಿಲ್ಲ. ಆದರೆ ಅವರು ಸ್ನೇಹಮಯಿಯಾಗಿ, ಕರುಣಾಮಯಿಯಾಗಿ, ಆತ್ಮೀಯರಾಗಿ ನನ್ನವರಂತೆ ನನಗನ್ನಿಸಿತ್ತು. ಅವರಿಗೆ ವಿದಾಯ ಹೇಳಿ ಬರುವಾಗ ಪ್ರಣಾಮ ಮಾಡಿದೆ; ಬಳಿಕ ಹೊರಡುವಾಗ ಶ್ರೀಮಾತೆ ನನ್ನ ಮುಖವನ್ನೇ ದಿಟ್ಟಿಸುತ್ತ ಒಂದು ಮಾತು ಹೇಳಿದರು. ನನಗಿಂತ ಮೊದಲು ಶ್ರೀಮಾತೆಯವರಿಗೆ ಪ್ರಣಾಮ ಮಾಡಲು ಹೋದವರು ಹೂ, ಬಿಲ್ವಪತ್ರೆ ಮುಂತಾದವುಗಳ ಜೊತೆಗೆ ಒಂದು ಬುಟ್ಟಿಯಲ್ಲಿ ಎಲೆಗಳಿಂದ ಕೂಡಿದ ನೆಲ್ಲಿಕಾಯಿಯನ್ನು ಅವರಿಗೆ ಅರ್ಪಿಸಿದ್ದರು. ಆಗ ಶ್ರೀಮಾತೆ ಪೂಜೆ ಮಾಡುವ ಆಸನದಲ್ಲಿ ಕುಳಿತಿದ್ದರು. ಪ್ರಣಾಮ ಮಾಡಿದನಂತರ ಶ್ರೀಮಾತೆ ಇದ್ದಕ್ಕಿದ್ದಂತೆ ಆ ನೆಲ್ಲಿ ಎಲೆಯನ್ನು ತೆಗೆದುಕೊಂಡು ನನ್ನತ್ತ ತೋರಿಸಿ ಹೇಳಿದರು. ''ಮಗೂ ಜ್ಞಾನ್, ಈ ನೆಲ್ಲಿ ಎಲೆಗಳು ಬಿಲ್ವಪತ್ರೆಯಂತೆಯೇ ಶಿವನಿಗೆ ಅತ್ಯಂತ ಪ್ರಿಯವಾದದ್ದು.'' ಅವರು ಏಕೆ ಹಾಗೆಂದರೋ ತಿಳಿಯೆ; ಆದರೆ ಅದು ಇಂದಿಗೂ ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ನಿಂತಿದೆ. ನಾನು ಕೆಲಸ ಮಾಡುತ್ತಿದ್ದಲ್ಲಿಗೆ ಮರಳಿದೆ. ಆದರೆ ಆಗಾಗ ನನ್ನ ಮನಸ್ಸು ಜಯರಾಂಬಾಟಿಯತ್ತ ಸಾಗಿಬಿಡುತ್ತಿತ್ತು.

ಆದರೆ ಜ್ಞಾನ್ ಮಹಾರಾಜ್ ಆಸೆ ಬಿಡಲಿಲ್ಲ. ಅವರ ಉತ್ಸಾಹ, ಪ್ರೇರಣೆಗಳಿಂದಲೇ ನಾನು ಆ ಸಲದ ದೊಡ್ಡ ರಜೆಯಲ್ಲಿ ಮತ್ತೆ ಜಯರಾಮಬಾಟಿಗೆ ಹೋದೆ. ಈ ಬಾರಿ ಕೂಡಾ ಶ್ರೀಮಾತೆಯವರ ಹೊಸ ಮನೆಯಲ್ಲಿ ನನಗೆ ತಂಗಲು ವ್ಯವಸ್ಥೆ ಮಾಡಲಾಗಿತ್ತು. ರಾಮಮಯ ಮಹಾರಾಜರೇ ಮತ್ತೊಮ್ಮೆ ನನ್ನನ್ನು ಶ್ರೀಮಾತೆಯವರ ಬಳಿಗೆ ಕರೆದುಕೊಂಡು ಹೋದರು. ಅವರಿಗೆ ಪ್ರಣಾಮ ಮಾಡಿದ ಮೇಲೆ ಅವರು ಯಾವ ರೀತಿ ತಮ್ಮ ಮನಸ್ಸಿನ ಭಾವನೆಯನ್ನು ಪ್ರಕಟಿಸಿದರೆಂದರೆ, ಕಳೆದ ಬಾರಿ ಅನಾರೋಗ್ಯದಿಂದ ದೀಕ್ಷೆ ನಡೆಯಲಿಲ್ಲ , ಈ ಬಾರಿ ದೀಕ್ಷೆ ನಡೆದರೇನೇ ಒಳ್ಳೆಯದು ಎಂಬಂತೆ. ಶ್ರೀಮಾತೆಯವರ ಈ ಅನಿರೀಕ್ಷಿತ ಇಚ್ಛೆಯು ನನ್ನ ಮನಸ್ಸಿನಲ್ಲಿ ಅಗಾಧ ಕಂಪನವನ್ನುಂಟುಮಾಡಿತು. ಸಂತೋಷದಿಂದ ನಾನು ನನ್ನ ಮನಸ್ಸಿನ ಬಯಕೆಯನ್ನು ಅವರಲ್ಲಿ ನಿವೇದಿಸಿಕೊಂಡೆ. ಆಗ ಅವರು ಮರುದಿನವೇ ದೀಕ್ಷೆಯ ದಿನವೆಂದು ನಿಶ್ಚಯಿಸಿದರು. ಮರುದಿನ ಬೆಳಿಗ್ಗೆ ಪುಣ್ಯಪುಕುರದಲ್ಲಿ ಸ್ನಾನ ಮಾಡಿ, ಹಿಂದೆಂದೂ ಅನುಭವಿಸದ ಒಂದು ವಿಚಿತ್ರ ಅನುಭವವನ್ನು ನನ್ನ ಹೃದಯದಲ್ಲಿ ಧರಿಸಿಕೊಂಡು ನಾನು ಶ್ರೀಮಾತೆಯವರ ಕೋಣೆಯನ್ನು ಪ್ರವೇಶಿಸಿದೆ. ನಾನು ಯಾವ ವಿಧದಲ್ಲೂ ಮಂತ್ರದೀಕ್ಷೆಗೆ ಸಿದ್ಧನಾಗಿರಲಿಲ್ಲ. ಬೇರೇನನ್ನೂ ನನ್ನೊಂದಿಗೆ ಕೊಂಡುಹೋಗಿರಲಿಲ್ಲ. ಅತ್ಯಂತ ದೀನನಾಗಿದ್ದ ನನ್ನನ್ನು ಶ್ರೀಮಾತೆ

ತಮ್ಮ ಕೋಣೆಯಲ್ಲಿ , ತಮ್ಮ ಪಕ್ಕದಲ್ಲಿ ಕುಳ್ಳಿರಿಸಿಕೊಂಡು ನನಗೆ ಮಹಾಮಂತ್ರವನ್ನು ನೀಡಿದರು. ದೀಕ್ಷೆಯ ನಂತರ ನನ್ನ ಮೂಲಕ ಮೂರು ಬಾರಿ ಜಪ ಮಾಡಿಸಿದರು ಕೂಡ. ಅದೇ ಕ್ಷಣದಲ್ಲಿ ನನ್ನ ಕಣ್ಣಮುಂದೆ ಒಂದು ಅದ್ಭುತ ತೆರೆ ಸರಿದು ಹೋಯಿತು! 'ಮೋಕ್ಷ ದ್ವಾರ-ಕಪಾಟ-ಪಾಟನಕರಿ'ಯೂ, ಕರುಣಾಮಯಿಯೂ ಆದ ಶ್ರೀಮಾತೆ ಅದೇನು ಮಾಡಿದರೋ ಗೊತ್ತಿಲ್ಲ! ಆದರೆ ನಾನು ಅವರ ಮುಖವನ್ನೇ ದಿಟ್ಟಿಸಿ ನೋಡುತ್ತಿದ್ದಂತೆ, ನನ್ನ ಇಷ್ಟಮಂತ್ರದ ಅಧಿ ದೇವತೆಯನ್ನು ಅವರಲ್ಲಿಯೇ ಕಂಡೆ. ಮೂರು ಬಾರಿ ನೋಡಿದೆ. ನಾನು ಅವಾಕ್ಕಾಗಿ ಅವರನ್ನೇ ನೋಡುತ್ತ ನಿಂತುದನ್ನು ಕಂಡು ಶ್ರೀಮಾತೆ ಕೇಳಿದರು, ''ಏನು ನೋಡುತ್ತಿದ್ದೀಯಾ ಮಗೂ? ಏನನ್ನು ನೋಡಿದೆಯೋ, ಸರಿಯಾಗಿಯೇ ನೋಡಿದ್ದೀಯೆ.'' ಕೃಪಾಪೂರ್ಣವಾದ ಪ್ರಸನ್ನ ಮುಖದಿಂದ ಕೂಡಿದ ಶ್ರೀಮಾತೆ ನನ್ನ ದೃಷ್ಟಿಯ ಆವರಣವನ್ನು ಸರಿಸಿ, ತಮ್ಮ ನಿಜವಾದ ಸ್ವರೂಪ ವನ್ನು ಧರಿಸಿ ನಿಂತರು. ಅನಂತ ರೂಪಿಣಿಯಾದ ಶ್ರೀ ಶಾರದೆಯ ವರಾಭಯ ಮೂರ್ತಿಯು ನನ್ನ ಮುಂದೆ ಪ್ರಕಟಗೊಂಡಿತು. ನನ್ನ ಸರ್ವಾಂಗವೂ ಕಂಪಿಸಿ, ವಿಸ್ಮಯ ಹಾಗೂ ಆನಂದದಿಂದ ಸ್ತಬ್ಧನಾಗಿದ್ದ ನನಗೆ ಶ್ರೀಮಾತೆ ಹೇಳಿದರು: ''ಮಗೂ, ದಕ್ಷಿಣೆ ಕೊಡು.'' ನನ್ನ ಬಳಿ ಏನೂ ಇರಲಿಲ್ಲ. ಕೋಣೆಯ ಒಂದು ಮೂಲೆಯಲ್ಲಿ ಕೆಲವು ಹಣ್ಣನ್ನು ಆರಿಸಿ ತಂದು, ಅವರಿಗೆ ನೀಡಲು ಶ್ರೀಮಾತೆ ಹೇಳಿದರು. ಚಾಲನೆ ಮಾಡಿದ ಯಂತ್ರದಂತೆ, ಅವರು ಹೇಳಿದಂತೆ ಆ ಹಣ್ಣನ್ನು ತಂದು ಅವರಿಗೆ ಸಮರ್ಪಿಸಿದೆ. ಈ ನನ್ನ ಜೀವನ ಕೃತಾರ್ಥವಾಯಿತು. ಈ ಮನುಷ್ಯ ಜೀವನ ಸಾರ್ಥಕ ವಾಯಿತು. ಶ್ರೀಮಾತೆಯವರಿಗೆ ಪ್ರಣಾಮ ಮಾಡಿ ಹೊರಗೆ ಬಂದೆ; ಮತ್ತೆ ದಿಗ್ಭ್ರಾಂತನಾಗಿ ಆಲೋಚಿಸತೊಡಗಿದೆ— ಇದೇನು ನಡೆದು ಹೋಯಿತು?

ಅಂದು ಮಧ್ಯಾಹ್ನ ಉಳಿದ ಭಕ್ತರೊಂದಿಗೆ ಶ್ರೀಮಾತೆಯವರ ಕೋಣೆಯ ಮುಂದಿನ ಜಗಲಿಯಲ್ಲಿ ಪ್ರಸಾದಕ್ಕಾಗಿ (ಊಟ ಮಾಡಲು) ಕುಳಿತಿದ್ದೆ. ನಾನು ಹೊಸಬ; ನಾಚುಗೆಯ ಸ್ವಭಾವ ದವನು. ಆದ್ದರಿಂದ ಪಂಕ್ತಿಯ ಕೊನೆಯಲ್ಲಿ ಊಟಕ್ಕೆ ಕುಳಿತಿದ್ದೆ. ಬಡಿಸಲು ಆರಂಭಿಸಿದಾಗ ಶ್ರೀಮಾತೆ ಅಲ್ಲಿಗೆ ಬಂದು ತಮ್ಮ ಕೋಣೆಯ ಬಾಗಿಲಲ್ಲಿ ನಿಂತರು. ಬಾಗಿಲಲ್ಲಿ ಒಂದು ಕೈಯನ್ನು ಇಟ್ಟುಕೊಂಡು ಅವರು ನಿಂತಿದ್ದರು. ಅವರು ಎಷ್ಟೊಂದು ಪ್ರೀತಿ ಯಿಂದ ಎಲ್ಲರನ್ನು ನೋಡುತ್ತಾ ನಿಂತಿದ್ದರು, ಹಾಗೂ ಎಲ್ಲರಿಗೂ ಊಟ ಮಾಡಿಸುತ್ತಿದ್ದರು! ದೀಕ್ಷೆ ನೀಡುವಾಗ ಹೇಗೋ ಅದೇ ರೀತಿ ಈಗಲೂ ಅವರನ್ನು ಅದೇ ವರಾಭಯ ಮೂರ್ತಿಯಾಗಿ ಮತ್ತೆ ಕಂಡೆ. ನಾನು ತಲೆ ತಗ್ಗಿಸಿಕೊಂಡೇ ಊಟ ಮಾಡುತ್ತಿದ್ದೆ. ಇದ್ದಕ್ಕಿದ್ದಂತೆ ಒಬ್ಬರು ನನ್ನ ಬಳಿಗೆ ಬಂದು, ನನಗೆ ಒಂದು ತಟ್ಟೆ ಯಲ್ಲಿ ಪಾಯಸವನ್ನು ನೀಡಿ ಹೇಳಿದರು: ''ಶ್ರೀಮಾತೆ ನಿನಗೆ ಕಳುಹಿಸಿಕೊಟ್ಟಿದ್ದಾರೆ.'' ತಲೆಯೆತ್ತಿ ನೋಡಿದೆ, ಶ್ರೀಮಾತೆ ಮೃದು ಸ್ವರದಿಂದ ಹೇಳುತ್ತಿದ್ದರು, ''ತೆಗೆದುಕೋ ಮಗೂ, ಎಲ್ಲವನ್ನೂ ತೆಗೆದುಕೋ.'' ಆದರೆ ಆಗ ನನಗೆ ಊಟಮಾಡುವ ಮನಃಸ್ಥಿತಿ ಯಿರಲಿಲ್ಲ. ಶ್ರೀಮಾತೆಯವರ ಈ ಜಗತ್ತನ್ನು ಮೀರಿದ ಪ್ರೀತಿ, ಬೇಡದೆಯೆ ನೀಡಿದ ಕರುಣೆ ಇವನ್ನು ಕಂಡು ನನ್ನ ಕಣ್ತುಂಬಿ ಬಂತು. ಆವೇಗ, ನಿಟ್ಟುಸಿರುಗಳೊಂದಿಗೆ ನನ್ನ ಕಂಠ ಬಿಗಿದು ಕೊಂಡಿತು. ಎಲ್ಲರ ನಡುವೆ ನನಗೆ ಈ ವಿಶೇಷ ಆದರ ನೀಡಿದ್ದ ರಿಂದ ನಾನು ಕುಗ್ಗಿಹೋದೆ. ನಿಧಾನವಾಗಿ ನಾನು ಆ ಪ್ರಸಾದ ವನ್ನೆಲ್ಲ ಸೇವಿಸಿ ಮುಗಿಸಿದೆ. ನನ್ನ ಜೀವನದಲ್ಲಿ ನಡೆದ ಆ ಸ್ಮರ ಣಾರ್ಹವಾದ ದಿನದ ಅವಿಸ್ಮರಣೀಯ ಘಟನೆಯು ನನ್ನ ನೆನಪಿನ ರತ್ನಾಗಾರದಲ್ಲಿ ಇಂದಿಗೂ ಉಜ್ವಲವಾಗಿ ಬೆಳಗುತ್ತಿದೆ.

ಈ ಬಾರಿ ಜಯರಾಮಬಾಟಿಯಲ್ಲಿ ಇನ್ನೂ ಕೆಲವು ದಿನ ನಾನು ತಂಗಿದ್ದೆ. ಶ್ರೀಮಾತೆಯವರ ಗೃಹೀಭಕ್ತರಾದ ವಿಭೂತಿ ಬಾಬು ಹಾಗೂ ರಾಮಮಯ ಮಹಾರಾಜರ ಬಳಿ ಜಪ-ಧ್ಯಾನಕ್ಕೆ ಸಂಬಂಧಿಸಿದ ಹಲವು ಸಂಗತಿಗಳನ್ನು ಕೇಳಿ ತಿಳಿದುಕೊಂಡಿದ್ದೆ. ಈ ಕಾರಣದಿಂದ ಶ್ರೀಮಾತೆಯವರ ಕೋಣೆಯಲ್ಲೋ, ಅಥವಾ ವರಾಂಡದಲ್ಲೋ ಅವರಿಗೆ ಪ್ರಣಾಮ ಮಾಡಲು ಹೋಗುತ್ತಿದ್ದೆ. ಜಯರಾಮಬಾಟಿಯಲ್ಲಿ ವಾಸ ಮಾಡುತ್ತಿದ್ದಾಗ ಶ್ರೀಮಾತೆ ಅತ್ಯಂತ ಸಹಜ, ಸ್ವಚ್ಛಂದ ಹಾಗೂ ಸ್ವಾಭಾವಿಕವಾದ ಮನಃಸ್ಥಿತಿ ಯಿಂದ ಇರುತ್ತಿದ್ದುದನ್ನು ನಾನು ಗಮನಿಸಿದೆ. ಅಲ್ಲಿ ಹೆಚ್ಚಾಗಿ ಅವರ ಮಾನವ ಸ್ವಭಾವವನ್ನೇ ನಾನು ಕಂಡಿದ್ದೆ. ಜಯರಾಮ ಬಾಟಿಯಲ್ಲಿ ಅವರ ಕರುಣಾಮಯಿ ಮಾತೃಭಾವವೇ ಹೆಚ್ಚಾಗಿ ಪ್ರಕಟವಾಗುತ್ತಿತ್ತು. ಇದಕ್ಕೆ ಅವರ ಬಂಧು ಬಳಗದ ಸನ್ನಿವೇಶವೇ ಬಹುಶಃ ಕಾರಣವಾಗಿರಬೇಕು. ಅಲ್ಲಿಂದ ನಾನು ಹೊರಟು ಬರುವ ದಿನ ಅವರಿಗೆ ಪ್ರಣಾಮ ಮಾಡಿದಾಗ, ಅವರು ನನ್ನ ತಲೆಯ ಮೇಲೆ ಕೈಯಿಟ್ಟು ಆಶೀರ್ವದಿಸಿ, ''ಚೆನ್ನಾಗಿರು, ಮಗೂ'' ಎಂದರು. ಈಗಲೂ ಆ ಧ್ವನಿ ನನ್ನ ಕಿವಿಯಲ್ಲಿ ಮೊಳಗುತ್ತಿದೆ.

೧೯೨೦ ನೇ ಇಸವಿಯ ಆರಂಭದಿಂದಲೇ ಶ್ರೀಮಾತೆಯವರ ಶರೀರ ಕ್ರಮೇಣ ಶಿಥಿಲವಾಗುತ್ತ ಬಂತು. ಮಾರ್ಚ್ ತಿಂಗಳಲ್ಲಿ ಅವರನ್ನು ಚಿಕಿತ್ಸೆಗಾಗಿ 'ಉದ್ಬೋಧನ'ಕ್ಕೆ ಕರೆತರಲಾಯಿತು. ಆಗ ನಾನು ಕಲ್ಕತ್ತೆಯಿಂದ ಜ್ಞಾನ್ ಮಹಾರಾಜ್ ಬರೆದ ಪತ್ರವೊಂದನ್ನು ಪಡೆದೆ. ಶ್ರೀಮಾತೆಯವರ ದೇಹಾರೋಗ್ಯ ತೀರ ಹದಗೆಟ್ಟಿದೆ ಯೆಂದು ಅದರಿಂದ ನನಗೆ ತಿಳಿಯಿತು. ಅವರ ದರ್ಶನ ಪಡೆ ಯುವುದಿದ್ದರೆ ಇನ್ನು ತಡಮಾಡಬಾರದು; ಆ ಪತ್ರವನ್ನು ಪಡೆದ ನಂತರ, ಅಂದರೆ ಜುಲೈ ತಿಂಗಳ ಮೊದಲ ಭಾಗದಲ್ಲಿ ನಾನು ಕಲ್ಕತ್ತೆಗೆ ಬಂದು, ಶ್ಯಾಮ್‌ಬಜಾರ್‌ನಲ್ಲಿ ಒಂದು ಮನೆಯಲ್ಲಿ ತಂಗಿದೆ, ಹಾಗೂ ದರ್ಶನ ಮಾಡಲು ತಕ್ಕ ಸಮಯದಲ್ಲಿ ಶ್ರೀಮಾತೆಯವರ ದರ್ಶನ ಪಡೆಯಲು 'ಉದ್ಬೋಧನ'ಕ್ಕೆ ಹೋದೆ. ಆಗ ಶ್ರೀಮಾತೆಯವರು ತೀವ್ರ ಅನಾರೋಗ್ಯದಿಂದ ಹಾಸಿಗೆ ಹಿಡಿದಿದ್ದರು. ಆಗ ಅವರ ದರ್ಶನ ಮತ್ತು ಪ್ರಣಾಮ ಮಾಡಲಷ್ಟೇ ಸಾಧ್ಯವಾಯಿತು. 'ಉದ್ಬೋಧನ'ದಲ್ಲಿ ಶ್ರೀಮಾತೆ ಬೇರೆ ಭಾವದಲ್ಲಿರುತ್ತಿದ್ದರು. ಅವರ ದರ್ಶನ ಮಾಡಲು ಸೂಕ್ತ

ವೇಳೆಯಲ್ಲೇ ಹೋಗಬೇಕಿತ್ತು ಹಾಗೂ ಅನೇಕ ಮಂದಿ ಭಕ್ತರ ಜೊತೆಗೆ ಹೋಗಬೇಕಾಗಿತ್ತು. ಜಯರಾಮಬಾಟಿಯಲ್ಲಿ ಇರುತ್ತಿದ್ದ ಶ್ರೀಮಾತೆಯವರ ಸಹಜ, ಸ್ವಚ್ಛಂದ ರೂಪವು ಇಲ್ಲಿ ಅವರ ದೈವೀ ಭಾವದ ಆವರಣದಲ್ಲಿ ಅಡಗಿರುವಂತೆ ಕಂಡುಬರುತ್ತಿತ್ತು. ಈ ಬಾರಿ ಅವರೊಂದಿಗೆ ಯಾವುದೇ ಮಾತುಕತೆ ನಡೆಸಿದ ಹಾಗೆ ನನಗೊಂದೂ ನೆನಪಿಗೆ ಬರುತ್ತಿಲ್ಲ.

ಶ್ರೀಮಾತೆಯವರ ಕೊನೆಯ ದರ್ಶನವನ್ನು ನಾನು ಪಡೆದುದು ಅವರು ಸ್ಥೂಲ ಶರೀರವನ್ನು ತ್ಯಜಿಸಿದ ನಂತರ. ಅವರು ದೇಹತ್ಯಾಗ ಮಾಡಿದ ಸುದ್ದಿ ಕೇಳಿದ ಮರುದಿನವೇ ನಾನು ಅವರಿಗೆ ಅಂತಿಮ ಪ್ರಣಾಮ ಮಾಡಲು ಧಾವಿಸಿದೆ. ಅಂದು ಇಡೀದಿನ ಬೇಲೂರು ಮಠದಲ್ಲಿ ಶ್ರೀಮಾತೆಯವರ ದಿವ್ಯಶರೀರವನ್ನು ಪವಿತ್ರ ಹೋಮಾಗ್ನಿಯಲ್ಲಿ ಆಹುತಿ ನೀಡುವವರೆಗೂ, ನಾನು ಅವರ ಸಮೀಪದಲ್ಲೇ ಇದ್ದೆ.

ನಾನು ಒಂದು ರೀತಿಯ ಜಡಸ್ವಭಾವದವನು. ಬ್ರಹ್ಮ-ಶಕ್ತಿಯು ಈ ದೇಹವನ್ನು ಅವಲಂಬಿಸಿ ಜಗನ್ಮಾತೆಯ ರೂಪದಿಂದ ಲೀಲಾನಿರತವಾಗಿತ್ತು ಎಂದು ನಾನು ಸಂನ್ಯಾಸಿಗಳ ಹಾಗೂ ಭಕ್ತರ ಬಾಯಿಯಿಂದ ಕೇಳಿದ್ದೆ; ಹಾಗೆ ನಂಬಿದ್ದೆ ಕೂಡ. ಆದರೆ ಅದು ಅನುಭವವಾಗಿ ನನಗೆಂದಿಗೂ ವೇದ್ಯವಾಗಲಿಲ್ಲ. ಆದರೆ ಶ್ರೀಮಾತೆಯವರ ಪ್ರೀತಿ ಹಾಗೂ ಅಲೌಕಿಕ ಭಾವದಿಂದ ಪರಿಪೂರ್ಣವಾಗಿದ್ದ ಅವರ ಮುಖ—ಇವು ನನ್ನ ಮನಸ್ಸಿನ ಮೇಲೆ ಆಳವಾದ ಮುದ್ರೆಯನ್ನೊತ್ತಿದ್ದವು. ಇಂತಹ ಮುಖ ಚರಾಚರಗಳಲ್ಲೆಲ್ಲೂ ಕಾಣಿಸದಂಥ ಅಪೂರ್ವವಾದ ಮುಖ — ಇಷ್ಟು ಮಾತ್ರ ನನಗೆ ಅರ್ಥವಾಗುತ್ತಿತ್ತು. ಶ್ರೀಮಾತೆಯವರ ಜೀವನಚರಿತ್ರೆಯಲ್ಲಿ ಬರೆದಿದೆ: ಕಾಶಿಯಲ್ಲಿ ಒಬ್ಬಾಕೆ ಹೆಂಗಸು ಶ್ರೀಮಾತೆಯವರ ಎದುರಿಗೇ ಗೋಲಾಪ್ ಮಾಳನ್ನು 'ಶ್ರೀಮಾತೆ' ಎಂದೇ ಭಾವಿಸಿದಾಗ, ಆಕೆಯಿಂದಲೇ ಬೈಸಿಕೊಂಡಿದ್ದಳು. ಆಗ ಎದುರಿಗೇ ಇದ್ದ ಶ್ರೀಮಾತೆಯವರನ್ನು ಕುರಿತು ಗೋಲಾಪ್ ಮಾ ಹೇಳಿದ್ದಳು, ''ಸರಿಯಾಗಿ ನೋಡು — ಮನುಷ್ಯಮಾತ್ರರಿಗೆ ಇಂತಹ ಮುಖವಿದ್ದೀತೆ, ಹೇಳು?'' ನನಗೂ ಎಷ್ಟು ಸಲ ಶ್ರೀಮಾತೆಯವರ ಮುಖವನ್ನು ನೋಡುವ ಅವಕಾಶ ಲಭಿಸಿತ್ತೋ, ಅಷ್ಟೊಂದು ಬಾರಿಯೂ ಅನ್ನಿಸಿತ್ತು — 'ಇಂಥ ಮುಖ ಮನುಷ್ಯರಿಗೆ ಇದ್ದೀತೆ?' ಎಂದು!

ಯಾರು ಮಾನವ ಶರೀರವನ್ನು ಧಾರಣೆ ಮಾಡಿಕೊಂಡು, ಮಾನವರಂತೆ ವರ್ತಿಸುತ್ತ ಆವಿರ್ಭಾವ ಹೊಂದಿದ್ದರೋ, ಅಂತಹ ಶ್ರೀಮಾತೆಯವರಲ್ಲಿ ಒಂದೆರಡು ಬಾರಿ ಬಿಟ್ಟರೆ ನಾನೆಂದಿಗೂ ಅಮಾನುಷವಾದ, ಅಲೌಕಿಕವಾದ ಸಂಗತಿಗಳನ್ನೆಂದೂ ಕಾಣಲಿಲ್ಲ, ಅಥವಾ ನನಗೆ ಅದು ಅರ್ಥವಾಗಲಿಲ್ಲ. ಆದರೂ ಅವರ ಮುಖದಲ್ಲಿದ್ದ ಆ ಮೃದು ಗಾಂಭೀರ್ಯ ಅವರ ಆಂತರಿಕ ಸತ್ತ್ವದ ಬಾಹ್ಯ ಪ್ರಕಟಣೆ ಎಂಬುದು ಮಾತ್ರ ನನಗೆ ಅರ್ಥವಾಗಿತ್ತು.

ಈಗ ನನ್ನ ಜೀವನದ ಅಂತಿಮಭಾಗ ಸಮೀಪಿಸಿದೆ. ನನ್ನ ಜೀವನ ನೌಕೆಯು ಶ್ರೀ ರಾಮಕೃಷ್ಣರೆಂಬ ಸಾಗರದತ್ತ ಚಲಿಸುತ್ತಿದೆ. ಈ ನೌಕೆಯ ಹಾಯಿ ಹಿಡಿದಿರುವ ವ್ಯಕ್ತಿಯ ಮುಖವನ್ನಾವರಿಸಿದ ಸೆರಗು ನಡುನಡುವೆ ಸರಿದಾಗ, ಇಂದಿಗೂ ಅದೇ ಮುಖ ಒಮ್ಮೊಮ್ಮೆ ಕಾಣಲು ಸಿಗುತ್ತದೆ. ಅದೇ ಭರವಸೆಯೊಂದಿಗೆ, ಅವರ ಮುಖವನ್ನೇ ನೋಡುತ್ತಾ ನಾನು ನಿಶ್ಚಿಂತೆಯಿಂದ ಇದ್ದೇನೆ. ❋

*(ಮೂಲ ಬಂಗಾಳಿಯಲ್ಲಿ ಲೇಖಕರಿಂದ ಕೇಳಿ ಬರಹರೂಪಕ್ಕೆ ಇಳಿಸಿದವರು: ಸ್ವಾಮಿ ಅಚ್ಯುತಾನಂದ)*

## ಸ್ವಾಮಿ ಪ್ರೇಮಾನಂದರಿಗಾದ ದರ್ಶನ



ಸ್ವಾಮಿ ಪ್ರೇಮಾನಂದರ ಜೀವನವೆಲ್ಲವೂ ಸಂಪೂರ್ಣ ಶರಣಾಗತಿಯದಾಗಿತ್ತು. ಅವರ ಜೀವನದ ಪ್ರತಿ ಯೊಂದು ಕ್ಷಣವೂ, ಪ್ರತಿಯೊಂದು ಕ್ರಿಯೆಯೂ ಶ್ರೀರಾಮಕೃಷ್ಣರ ದಿವ್ಯಸಾನ್ನಿಧ್ಯದಿಂದ ತುಂಬಿಕೊಂಡಿತ್ತು. ಕೆಲವೊಮ್ಮೆ ಈ ಸಾನ್ನಿಧ್ಯವು ನಿಜವಾಗಿಯೂ ಕಣ್ಣಿಗೆ ಕಾಣಿಸುತ್ತಿತ್ತು. ತಮ್ಮ ಪ್ರಿಯ ಗುರುವಿನ ದರ್ಶನದಿಂದ ಅವರು ಪುನೀತರಾಗುತ್ತಿದ್ದರು.

ಒಂದು ಸಲ ಸ್ವಾಮಿ ಬ್ರಹ್ಮಾನಂದರು ಹಾಗೂ ಸ್ವಾಮಿ ಪ್ರೇಮಾನಂದರು ಯಾವುದೋ ಒಂದು ವಿಷಯದ ಬಗ್ಗೆ ತೀವ್ರವಾಗಿ ಭಿನ್ನಾಭಿಪ್ರಾಯವನ್ನು ಹೊಂದಿದರು. ಇದರಿಂದ ಪ್ರೇಮಾನಂದರು ನೊಂದರು. ಅಲ್ಲಿಂದ ಹೊರಟುಹೋಗುವುದೇ ಒಳ್ಳೆಯದು ಎಂದು ಭಾವಿಸಿ ಅವರು ಹೆಗಲಲ್ಲಿ ಒಂದು ಉತ್ತರೀಯವನ್ನು ಹಾಕಿಕೊಂಡು, ಬೇಲೂರು ಮಠದ ಆವರಣದಿಂದ ಹೊರನಡೆದರು. ಆದರೆ ಅವರು ಗೇಟಿನ ಹತ್ತಿರ ಬಂದಾಗ ಅವರ ಉತ್ತರೀಯವನ್ನು ಯಾರೋ ಹಿಂದಿನಿಂದ ಹಿಡಿದೆಳೆದರು; ಅವರ ಕುತ್ತಿಗೆ ಸುತ್ತ ಅದು ಬಿಗಿದುಕೊಂಡಿತು. ಹಿಂದಿರುಗಿ ನೋಡಿದಾಗ ಶ್ರೀರಾಮಕೃಷ್ಣರು ಅವರ ಮುಂದೆ ನಿಂತಿದ್ದರು. ''ಎಲ್ಲಿಗೆ ಹೋಗುತ್ತಿದ್ದೀಯಾ, ಮಗೂ?'' ಎಂದು ಅವರು ಪ್ರೇಮಾನಂದರನ್ನು ಕೇಳಿದರು. ''ನನ್ನನ್ನು ಇಲ್ಲಿಯೇ ಬಿಟ್ಟು ನೀನು ಹೇಗೆ ಹೋಗಬಲ್ಲೆ?'' ಎಂದು ಅವರು ಕೇಳಿದರು. ಈ ದರ್ಶನದಿಂದ ಭಾವೋನ್ನತರಾದ ಪ್ರೇಮಾನಂದರು ಓಡಿಹೋಗಿ ಸ್ವಾಮಿ ಬ್ರಹ್ಮಾನಂದರ ಪಾದಗಳಿಗೆ ಸಾಷ್ಟಾಂಗ ಪ್ರಣಾಮ ಮಾಡಿದರು.

*('Sri Ramakrishna Saves' ಗ್ರಂಥದಿಂದ)*